ಕೆಂಪು ರಸಾಯನದ ತುಂತುರಿಗೆ ಭಯಗೊಂಡು ಒಂದು ರೀತಿಯ ಸಂದಿಗ್ಧತೆಯಲ್ಲಿ ನಿಲ್ಲದೇ ಓಡಿ ಅನುಪಮಾ ಸುಸ್ತಾಗಿಹೋದಳು.

ಕಾಲೇಜಿನ ಆವಾರ ಪ್ರವೇಶಿಸುತ್ತಿದ್ದಂತೆಯೇ ಅಲ್ಲೇ ಕಂಪೌಂಡಿನ ಪಕ್ಕ ಗಜಗಾತ್ರದ ಸ್ಟೀಲಿನ ಫಳಫಳ ಹೊಳೆವ ಪೀಕುದಾನಿ ಕಂಡ ಅನುಪಮಾ ಆನಂದ ತುಂದಿಲಳಾದಳು. ಅಬ್ಬಾ, ಕಾಲೇಜಿನಲ್ಲಾದರೂ ಇನ್ನು ಮೇಲೆ ಕೆಂಪು ಮೋಡವಿಲ್ಲದ ಆ ನಿರಭ್ರ ಹಗಲು ಕಾಣಬಹುದು ಎಂದು ಕನಸಿದಳು. ಮನೆಗೆ ಮರಳಿದರೆ ಅಂದು ರಾತ್ರಿಯೆಲ್ಲ ಅವಳ ಸ್ವಪ್ನದಲ್ಲಿ ಕಾಲೇಜಿನ ಸುಂದರ ಪೀಕುದಾನಿಯೇ ನೃತ್ಯ ಮಾಡುತ್ತಿತ್ತು.

ಹೊಸ ಪ್ರಿನ್ಸಿಪಾಲರ ಆಜ್ಞೆಯಂತೆ, ಸ್ಟೇರ್‌ಕೇಸಿನ ಪ್ರತೀ ಮೂಲೆಯಲ್ಲೂ ಅಂಥ ಒಂದೊಂದು ವೈಯಾರದ ಪೀಕುದಾನಿಯನ್ನು ಇರಿಸಲಾಗಿತ್ತು. ಕಾಲೇಜಿನ ಎರಡನೇ ಅಂತಸ್ತು ಏರುವಾಗ ಎಕಾನಾಮಿಕ್ಸ್ ಪಾಠ ಮಾಡುವ ಜೇವರ್ಗಿ ಸರ್ ಎದುರಾದದ್ದೇ ಸುಮ್ಮನಿರಲಾಗದ ಅನುಪಮಾ ಏಕೋಭಾವದಲ್ಲಿ 'ಗುಡ್ ಮಾರ್ನಿಂಗ್ ಸರ್' ಅಂದಳು. ಇವಳು ಬಾಯ್ತೆಗೆದದ್ದೇ ಅಂದು ದೊಡ್ಡ ತಪ್ಪಾಗಿಹೋಯಿತು. ಹ್ಞ ಹ್ಞಾ ಅಂತ ಬಾಯ್ಬಿಟ್ಟ ಜೇವರ್ಗಿ ಸರ್ ಕೂಡ ತಮ್ಮ ಬಾಯಲ್ಲಿ ಕೆಂಪು ರಸಾಯನದ ಉತ್ಪಾದನಾ ಘಟಕ ಹೊಂದಿದ್ದು ಒಮ್ಮೆಲೇ ಅವಳ ಮೈನಡುಗಿಸಿತ್ತು.

ಚಂಗನೆ ಹಿಂದಕ್ಕೆ ಹಾರಿಬಿದ್ದ ಅನುಪಮಾ ಕಾಲು ತಡವರಿಸಿ ಹೋಗಿ ಸರೀ ಬಿದ್ದಿದ್ದು ಮೂಲೆಗಿಟ್ಟ ಆ ಪೀಕುದಾನಿಯಲ್ಲಿ. ಈಗ ಕೇಳಬೇಕೇ? ಇಡೀ ಹುಬ್ಬಳ್ಳಿ ಪಟ್ಟಣದ ಕೆಂಪು ರಸಾಯನ ಉತ್ಪಾದನಾ ಮಂಡಲ ಎಡಬಿಡದೇ ಪೀಕಿ, ಆ ಪೀಕುದಾನಿಯ ತುಂಬಿಸುತ್ತ ಅನುಪಮಾಳ ಮಹಾ ಮಸ್ತಕಾಭಿಷೇಕ ಮಾಡತೊಡಗಿತು. ಅನುಪಮಾ ಮೈಯೆಲ್ಲ ಹಿಡಿ ಮಾಡಿಕೊಂಡು ಆ ಕೆಂಪು ರಸಾಯನದಲ್ಲಿ ಈಜು ಹೊಡೆಯತೊಡಗಿದಳು. ಹುಬ್ಬಳ್ಳಿಯ ಸಮಸ್ತ ನಾಗರಿಕರೊಡನೆ ಸಮನ್ವಯ ಸಾಧಿಸುತ್ತ ಅವಳೇ ಪೀಕುದಾನಿಯಾಗಿಹೋದಳು. ನಂತರ ಸ್ಮಾರ್ಟ ಸಿಟಿಯ ಕಿರೀಟ ಅವಳಿಗೇ ಕಟ್ಟಲಾಯಿತು. ಬೆಳಿಗ್ಗೆ ಎಚ್ಚರವಾದಾಗ ತಲೆ ನೋವಿನಿಂದ ಹಣೆಗೆ ಬಿಗಿದುಕೊಂಡ ಸ್ಕಾರ್ಫನ್ನು ಕಿತ್ತೆಸೆದ ಅನುಪಮಾ ಲಗುಬಗೆಯಿಂದ ಎದ್ದವಳೇ ಮೊದಲು ಸ್ನಾನಕ್ಕೆ ನಡೆದಳು.

## ಸುನಂದಾ ಪ್ರಕಾಶ ಕಡಮೆ

ಮನುಷ್ಯ ವ್ಯಾಪಾರವನ್ನು ಸೂಕ್ಷ್ಮವಾಗಿ, ಚಿತ್ರವತ್ತಾಗಿ ರೇಖಿಸುವ ಕಲೆಗಾರ್ತಿ ಸುನಂದಾ ಪ್ರಸ್ತುತ ಹುಬ್ಬಳ್ಳಿಯಲ್ಲಿ ನೆಲಸಿದ್ದಾರೆ. ಅವರ 'ಪುಟ್ಟಪಾದದ ಹೆಜ್ಜೆ ಗುರುತು', 'ಗಾಂಧಿ ಚಿತ್ರದ ನೋಟು', 'ಕಂಬಗಳ ಮರೆಯಲ್ಲಿ', 'ತುದಿ ಮಡಚಿಟ್ಟ ಪುಟ' ಕಥಾಸಂಗ್ರಹಗಳು, 'ಬರೀ ಎರಡು ರೆಕ್ಕೆ', 'ದೋಣಿ ನಡೆಸುವ ಹುಟ್ಟು' ಕಾದಂಬರಿಗಳು ಪ್ರಕಟವಾಗಿವೆ. ಕವಿತೆ, ಅಂಕಣ ಬರಹಗಳ ಪುಸ್ತಕಗಳನ್ನೂ ಅವರು ಪ್ರಕಟಿಸಿದ್ದಾರೆ.